

**ಕಂದಮ್ಮಗಳನ್ನು ಕಾಡುತ್ತಿದೆ ಅಪೌಷ್ಟಿಕತೆ**

# ಕಮರುತ್ತಿದೆ ಕುಡಿ ಕೊನರಲು ಬಿಡಿ

**ಮಕ್ಕಳನ್ನು ಅಪೌಷ್ಟಿಕತೆ ತೀವ್ರವಾಗಿ ಕಾಡುತ್ತಿದೆ. ಈ ಬಗ್ಗೆ ಆರೋಗ್ಯ ಇಲಾಖೆ ನೀಡುವ ಅಂಕಿ ಅಂಶಗಳು ಕಳವಳಕಾರಿ. ಆರೋಗ್ಯದಿಂದ ಕುಣಿದು ಕುಪ್ಪಳಿಸಬೇಕಾದ ಮಕ್ಕಳು ಮಂಕಾಗಿ ಮಕಾಡೆ ಮಲಗುವಂತಾಗಿದೆ. ರಕ್ತಹೀನತೆ, ಪೌಷ್ಟಿಕ ಆಹಾರದ ಕೊರತೆ, ಆನುವಂಶೀಯತೆ ಮುಂತಾದ ಕಾರಣಗಳಿಂದ ಮಕ್ಕಳು ಸೊರಗಿ ಹೋಗುವಂತಾಗಿದೆ.**

■ **ಉಮಾ ಅನಂತ್**

ನಿಸ್ತೇಜವಾದ ಕಣ್ಣುಗಳು, ಬೆನ್ನಿಗಂಟಿದ ಹೊಟ್ಟೆ, ಅಸ್ಥಿಪಂಜರದಂತಹ ದೇಹ, ಮುರುಟಿಕೊಂಡ ಕೈಕಾಲುಗಳು... ಸೊರಗಿಕೊಂಡಿದ್ದ ಆ ಮಗುವನ್ನು ನೋಡಿದ ಕೂಡಲೇ ಇದು ‘ಅಪೌಷ್ಟಿಕ ಮಗು’ ಎಂದು ಯಾರು ಬೇಕಾದರೂ ಹೇಳುವಂತಿತ್ತು. ಕಾರಣ ಇಷ್ಟೆ. ಹೆತ್ತವರಿಗೆ ಕಿತ್ತು ತಿನ್ನುವ ಬಡತನ, ಯಾವುದು ಪೌಷ್ಟಿಕ, ಯಾವುದು ಅಲ್ಲ ಎಂಬ ಅರಿವಿನ ಕೊರತೆ ಜೊತೆಗೆ ಆನುವಂಶೀಯತೆ.. ಎಲ್ಲವೂ ಸೇರಿ ಮಗು ಪೇಲವಗೊಂಡಿತ್ತು. ಲವಲವಿಕೆಯಿಂದ ಎದ್ದು ಕುಣಿದು ಕುಪ್ಪಳಿಸಬೇಕಾದ ಮಗು ಹಸಿವಿನಿಂದ ಉಳಿವಿಗಾಗಿ ಹೋರಾಡುವಂತಿತ್ತು.

ಇದು ದೇಶದ ಒಂದು ಮಗುವಿನ ಚಿತ್ರಣವಲ್ಲ. ಲಕ್ಷಾಂತರ ಮಕ್ಕಳು ಇಂದು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಮೊನ್ನೆಮೊನ್ನೆ ನಮ್ಮ ದೇಶದಲ್ಲಿ ಅಪೌಷ್ಟಿಕತೆ ಬಗ್ಗೆ ನಡೆದ ಸಮೀಕ್ಷೆಯ ಸಾರ ನೋಡಿ. ಕಳೆದ ವರ್ಷ ನವೆಂಬರ್‌ವರೆಗೆ ಸಮೀಕ್ಷೆ ನಡೆಸಿ ತೀವ್ರ ಸ್ವರೂಪದ ಅಪೌಷ್ಟಿಕತೆ ಹೊಂದಿರುವ 6 ತಿಂಗಳಿನಿಂದ 6 ವರ್ಷದ 9.27 ಲಕ್ಷ ಮಕ್ಕಳನ್ನು ಗುರುತಿಸಲಾಗಿದ್ದು ಇದರ ಗಂಭೀರತೆಯನ್ನು ಬಯಲು ಮಾಡಿದೆ.

ವಿಶ್ವ ಆರೋಗ್ಯ ಸಂಸ್ಥೆ (WHO), ಮಗು ತನ್ನ ಎತ್ತರಕ್ಕೆ ತಕ್ಕಂತೆ ಪೂರಕವಾದ ತೂಕಕ್ಕಿಂತಲೂ ಕಡಿಮೆ ತೂಕ ಹೊಂದಿದ್ದರೆ ಅದನ್ನು ತೀವ್ರವಾದ ಅಪೌಷ್ಟಿಕತೆ ಎಂದು ವ್ಯಾಖ್ಯಾನಿಸಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಇಲಾಖೆ ನಾಲ್ಕು ವರ್ಷಗಳ ಹಿಂದೆಯೇ ನಡೆಸಿದ ಸಮೀಕ್ಷೆ ಪ್ರಕಾರ ಶೇ. 35ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಕೂಡಿದ್ದಾರೆ. ಹಲವಾರು ಮಕ್ಕಳು ಹುಟ್ಟುವಾಗಲೇ ಕಡಿಮೆ ತೂಕದಿಂದ ಹುಟ್ಟುವುದು ಕೂಡ ಇದೆ. ಇದಕ್ಕೆ ಗರ್ಭಿಣಿ ಚೆನ್ನಾಗಿ ಪೌಷ್ಟಿಕಾಂಶ ಸೇವಿಸದೇ ಇರುವುದು, ರಕ್ತಹೀನತೆಯಿಂದ ಬಳಲಿರುವುದು ಕಾರಣ.

### ಅಪೌಷ್ಟಿಕತೆಯ ಪರಿಣಾಮ ರಕ್ತಹೀನತೆ

ರಕ್ತಹೀನತೆ (ಅನೀಮಿಯಾ) ಎಂಬ ಆರೋಗ್ಯ ಸಮಸ್ಯೆ ಸಾಮಾನ್ಯವಾಗಿ ಮಕ್ಕಳಲ್ಲಿ ಕಬ್ಬಿಣಾಂಶ ಕೊರತೆಯಿಂದ ಬರುತ್ತದೆ. ಮಕ್ಕಳು ಬಿಳಿಚಿಕೊಳ್ಳುತ್ತಾರೆ. ವಿಪರೀತ ಸುಸ್ತು, ಚೈತನ್ಯದ ಕೊರತೆ, ಪದೇ ಪದೇ ಜ್ವರ ಬರುವುದು, ರೋಗ ನಿರೋಧಕ ಶಕ್ತಿ ಕಡಿಮೆಯಾಗುವುದು ಮುಂತಾದ